ಕಾಲಲರಾ ಬಂದ ಕಾಲದಲ್ಲಿ ಕ್ರೈಸ್ತಪಾದ್ರಿಗಳ ಜತೆ ವೈದ್ಯರಾಗಿ ದುಡಿದರು. ಚರ್ಚುಗಳಲ್ಲಿ ಪ್ರವಚನ ನೀಡಲು ಅವರಿಗೆ ಆಹ್ವಾನ ಇರುತ್ತಿತ್ತು. ಅವರ ತಾಯಿ ಸ್ವತಃ ಕ್ರೈಸ್ತಶಾಲೆಯಲ್ಲಿ ಕಲಿತವರು. ಅವರ ಪ್ರಿಯ ಶಿಷ್ಯರಲ್ಲಿ ಡಾ. ಎಸ್.ಆರ್. ಜಾನ್ ಹಾಗೂ ಖಿಬ್ಲಾ ಹುಸೇನ್ ಸೇರಿದ್ದರು. ತಾರಾನಾಥರು ಮೈಸೂರಿನ ಮುಸ್ಲಿಂ ಕಾನ್ಫರೆನ್ಸಿನ ಸದಸ್ಯರೊಡನೆ ತೆಗೆಸಿಕೊಂಡಿರುವ ಪಟವು, ವಿವಿಧ ಧಾರ್ಮಿಕ ಸಮುದಾಯಗಳ ಜತೆ ಅವರು ಹೊಂದಿದ್ದ ನಂಟನ್ನು ಸೂಚಿಸುತ್ತದೆ. 'ನಾನೊಬ್ಬ ಮೊದಲು ಮನುಷ್ಯ. ಮಾನವತೆ ನನ್ನ ಧರ್ಮ. ನನಗೆ ಸಂಕುಚಿತ ಜಾತಿಮತ ಪಂಗಡಗಳಲ್ಲಿ ನಂಬಿಕೆಯಿಲ್ಲ' ಎಂದು ಅವರು ಸದಾ ನುಡಿಯುತ್ತಿದ್ದರು. ರಾಜಕೀಯ ಹೋರಾಟ ಮತ್ತು ಸಾಮಾಜಿಕ ಸುಧಾರಣೆಗಳಿಗೆ, ಧಾರ್ಮಿಕ ಸಾಮರಸ್ಯದ ಆಯಾಮವಿರದಿದ್ದರೆ, ಅದು ಬಹಳ ದೂರ ಹೋಗಲಾರದು ಎಂದು ನಂಬಿದ್ದರು. ಅವರ ಮೇಲೆ ಪ್ರಭಾವ ಬೀರಿದ್ದ ಕಬೀರ್ ಮತ್ತು ಗಾಂಧಿ ಕೂಡ ಧಾರ್ಮಿಕ ಸಾಮರಸ್ಯ ಪ್ರತಿಪಾದಕರೇ ಆಗಿದ್ದರು. ತಾರಾನಾಥರ ಈ ನಿಲುವು ಮತ್ತು ನಂಬಿಕೆಗಳು, ಪ್ರೇಮಾಯತನವನ್ನು, ಮತೀಯವಲ್ಲದ ಧಾರ್ಮಿಕತೆ, ಎಲ್ಲರನ್ನು ಒಳಗೊಳ್ಳುವ ಜಾತ್ಯತೀತತೆ, ತನ್ನ ಚೈತನ್ಯವನ್ನು ತಾನೇ ಕಂಡುಕೊಳ್ಳುವ ಅಧ್ಯಾತ್ಮ ಮತ್ತು ನಾಡಹಿತಕ್ಕಾಗಿ ತೊಡಗುವ ಸಕ್ರಿಯ ರಾಜಕಾರಣಗಳು, ಹದವಾಗಿ ಬೆರೆವ ದಾರ್ಶನಿಕ ಕೇಂದ್ರವನ್ನಾಗಿ ರೂಪಿಸಿದವು.

## ಪ್ರೇಮದ ಪರಿಕಲ್ಪನೆ

ತಾರಾನಾಥರು ತಮ್ಮ ಆಶ್ರಮವನ್ನು 'ಪ್ರೇಮಾಯತನ' ಎಂದು ಕರೆಯಲು ಪ್ರೇರಣೆ, ಭಾರತದ ಗುರುಪಂಥಗಳಲ್ಲಿ ಅವರಿಗಿದ್ದ ಪ್ರವೇಶ ಮತ್ತು ಸಂಬಂಧ. ಸೂಫಿಗಳ 'ಇಶ್ಕ್' ಮತ್ತು ಇತರೆ ಗುರುಪಂಥಗಳಲ್ಲಿರುವ ಪ್ರೇಮದ ಪರಿಕಲ್ಪನೆಯು, ಅವರ ವ್ಯಕ್ತಿತ್ವ, ಚಿಂತನೆ ಹಾಗೂ ಸಂಸ್ಥೆಗಳ ಆಳದಲ್ಲಿದ್ದ ಪ್ರಜ್ಞೆಯಾಗಿತ್ತು. 'ಕಬೀರ್' ನಾಟಕದ ಹಿಂದೆ, ಸಾಧಕರು ತಮ್ಮ ಒಳಗಿನ ಚೈತನ್ಯವನ್ನು ತಾವೇ ಕಂಡುಕೊಳ್ಳುವ, ಪ್ರೇಮದ ಹಾದಿಯ ಮೂಲಕ ದೈವಿಕತೆಯನ್ನು ಸಾಕ್ಷಾತ್ಕರಿಸಿಕೊಳ್ಳುವ ಆಶಯವಿತ್ತು. 'ಪ್ರೇಮವನ್ನು ಬಿಟ್ಟು ಉಳಿದುದೆಲ್ಲ ವಿಷವು' (ಆಲ್ ಬಟ್ ಲವ್ ಈಸ್ ಗಾಲ್) ಎಂಬುದು, ಪ್ರೇಮಾಯತನದ ಧ್ಯೇಯವಾಕ್ಯ; ಆಶ್ರಮದಿಂದ ಪ್ರಕಟವಾಗುತ್ತಿದ್ದ ಪತ್ರಿಕೆಯ ಹೆಸರು 'ಪ್ರೇಮ'; ಆಶ್ರಮದಲ್ಲಿ 'ಪ್ರೇಮ ವಿದ್ಯಾಪೀಠ' ಹಾಗೂ 'ಪ್ರೇಮ ಡಿಸ್ಪೆನ್ಸರಿ'ಗಳಿದ್ದವು; ಯಾದಗಿರಿ, ರಾಯಚೂರು, ಬಳ್ಳಾರಿ, ನವಲಗುಂದ, ರಾಯದುರ್ಗಗಳಲ್ಲಿ ಅವರ ಶಿಷ್ಯರು 'ಪ್ರೇಮ' ಹೆಸರಿನ ಡಿಸ್ಪೆನ್ಸರಿಗಳನ್ನು ನಡೆಸುತ್ತಿದ್ದರು. ಹಮದರ್ದ್ ಶಾಲೆ ಹಾಗೂ ಪ್ರೇಮಾಯತನಗಳಲ್ಲಿ, ದಿನವೂ ದೈವಿಕ ಪ್ರೇಮದ ಹಾಡುಗಳನ್ನು ಸಾಮೂಹಿಕವಾಗಿ ಹಾಡಲಾಗುತ್ತಿತ್ತು. ಇದಕ್ಕಾಗಿ ಅವರು ಮೀರಾ, ಕಬೀರ ಹಾಗೂ ಸ್ವರಚಿತ ಹಾಡುಗಳನ್ನು ಒಳಗೊಂಡಿದ್ದ 'ಪ್ರೇಮ ಭಜನಾವಳಿ' ಎಂಬ ತತ್ವಪದ ಸಂಕಲನವನ್ನೇ ಪ್ರಕಟಿಸಿದ್ದರು. ಕಬೀರನ ತತ್ವಪದಗಳ ಮಾದರಿಯಲ್ಲಿ 'ತಾರಾ' ಅಂಕಿತದಲ್ಲಿ ಸ್ವತಃ ತತ್ವಪದಗಳನ್ನು ರಚಿಸುತ್ತಿದ್ದರು. ಹಮ್‌ದರ್ದ್ ಶಾಲೆಯ ಪ್ರಾರ್ಥನ ಗೀತೆಯಲ್ಲಿ 'ಪ್ರೇಮೀಕಾ ಪ್ರೇಮ ತೂ ಹೈ, ನೇಮೀಕಾ ನೇಮ ತೂ ಹೈ; ಭಕ್ತನ್ ಕಾ ಭಾನ ತೂ ಹೈ, ಆಶಿಕ್ ಬನಾನೆ ವಾಲೆ' ಎಂಬ ಚರಣಗಳಿವೆ. ಸಾಧಕರನ್ನು ಉದ್ದೇಶಿಸಿ ಅವರು ಬರೆದ ತತ್ವಪದಗಳಲ್ಲಿ 'ಗುರುವ ಕಾಣುತ ಪ್ರೇಮವನರಸು' ಮುಂತಾದ ನುಡಿಗಳಿವೆ. ಅವರ ಬರಹ ಮತ್ತು ಸಂಸ್ಥೆಗಳ ಹೆಸರುಗಳಲ್ಲಿ ಕಾಣಿಸುವ 'ಹಮ್‌ದರ್ದ್', 'ಪ್ರೇಮಿ', 'ಪ್ರೇಮ', 'ಆಶಿಕ್' ಮುಂತಾದ ಶಬ್ದಗಳು, ಗುರುಪಂಥಗಳಲ್ಲಿ ಸಹಜವಾಗಿರುವ ಪ್ರೇಮತತ್ವದ ನುಡಿಗಟ್ಟುಗಳು. ಅವರು ದೇಶಿ ಪತ್ರಕರ್ತನಿಗೆ ಕೊಟ್ಟ ಒಂದು ಸಂದರ್ಶನದಲ್ಲಿ ಹೇಳುತ್ತಾರೆ: ''ನಾನೋರ್ವ ಶ್ರೀಸಾಮಾನ್ಯ ಮಾನವ. ಪ್ರೇಮವೇ ನನ್ನ ತಾಯಿ. ಜಗಜ್ಜನನಿ ನನಗೆ ಕಲಿಸಿರುವ ಪಾಠ.'' ಪ್ರೇಮಾಯತನವು ಪ್ರೇಮವನ್ನು ಲೌಕಿಕ ಮತ್ತು ಆಧ್ಯಾತ್ಮಿಕ